RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ–I | ಬೆಂಗಳೂರು, ಮಂಗಳವಾರ, ಮಾರ್ಚ್ ೧೪, ೨೦೧೭ (ಫಾಲ್ಗುಣ ೨೩, ಶಕ ವರ್ಷ ೧೯೩೮) | ನಂ. ೨೫೬ |
|---|---|---|
| Part–I | Bengaluru, Tuesday, March 14, 2017 (Palguna 23, Shaka Varsha 1938) | No. 256 |

## ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ನಡವಳಿಗಳು

ಕೆ.ಎಸ್.ಸಿ.ಎಂ.ಎಫ್ ಬಿಲ್ಡಿಂಗ್ (ಹಿಂಭಾಗ), ನಂ.8, 1ನೇ ಮಹಡಿ ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು–52

**ಸಂಖ್ಯೆ : ರಾಚುಆ:14:ಇಯುಬಿ; 2017, ಬೆಂಗಳೂರು, ದಿನಾಂಕ: 10-03-2017**

**ವಿಷಯ:** ನಗರಪಾಲಿಕೆ /ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ ಮತದಾರನು ತನ್ನ ಮತವನ್ನು ಸ್ಪರ್ಧಿಸಿರುವ ಯಾವುದೇ ಅಭ್ಯರ್ಥಿಗೆ ನೀಡದೆಯೇ ತನ್ನ ಇಚ್ಛಾನುಸಾರ "ಮೇಲ್ಕಂಡ ಯಾರೂ ಅಲ್ಲ"/(ಮೇ.ಯಾ.ಅ.)/(NOTA)ಗೆ ತನ್ನ ಮತವನ್ನು ಚಲಾಯಿಸಲು ಅವಕಾಶ ಕಲ್ಪಿಸುವ ಬಗ್ಗೆ.

**ಓದಲಾಗಿದೆ:**
1. ಮಾನ್ಯ ಸರ್ವೋಚ್ಚ ನ್ಯಾಯಾಲಯವು WP (c) No.161/2004 ದಿನಾಂಕ 27.09.2013 ಆದೇಶ.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 26 ಶಾಸನ 2015 ದಿ.30.04.2015
3. ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ:248:ಇಜಿಪಿ: 2015, ದಿನಾಂಕ: 06–10–2015

**ಪ್ರಸ್ತಾವನೆ:**

ಮೇಲೆ ಓದಲಾದ ಮಾನ್ಯ ಸವೋಚ್ಛ ನ್ಯಾಯಾಲಯದ ಆದೇಶದಲ್ಲಿ ಮತಪತ್ರದಲ್ಲಿ ಮತ್ತು ಮತಯಂತ್ರಗಳಲ್ಲಿ ಮತದಾರನು ಯಾವುದೇ ಅಭ್ಯರ್ಥಿಗೆ ಮತ ನೀಡದೆಯೇ ತನ್ನ ಇಚ್ಛೆಯ ಅನುಸಾರ NOTA ಗೆ ತನ್ನ ಮತವನ್ನು ಚಲಾಯಿಸಲು ಮತಪತ್ರದಲ್ಲಿ / ಇ.ವಿ.ಎಂ. ನಲ್ಲಿ ಅವಕಾಶ ಕಲ್ಪಿಸುವಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ಆದೇಶಿಸಿದೆ. ಅದರಂತೆ ಕೇಂದ್ರ ಚುನಾವಣಾ ಆಯೋಗವು ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳಲ್ಲಿ "NOTA" ಜಾರಿಗೆ ತಂದಿದೆ.

ಮೇಲೆ ಓದಲಾದ ಕ್ರ.ಸಂ.(2) ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 9, 125, ಹಾಗೂ 164ಕ್ಕೆ ತಿದ್ದುಪಡಿ ಮಾಡಿದ್ದು, ಸದರಿ ತಿದ್ದುಪಡಿಯಂತೆ ಮೇಲೆ ಓದಲಾದ ಕ್ರ.ಸಂ.(3)ರ ಆದೇಶದಲ್ಲಿ ರಾಜ್ಯ ಚುನಾವಣಾ ಆಯೋಗವು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆಗೆ ತಯಾರಿಸುವ ಮತಪತ್ರದ ಪ್ರತ್ಯೇಕ ಕಾಲಂ ನಲ್ಲಿ "ಮೇಲ್ಕಂಡ ಯಾರೂ ಅಲ್ಲ" (ಮೇ ಯಾ ಅ) ಎಂದು ಮುದ್ರಿಸಿ, NOTA ಅವಕಾಶ ಕಲ್ಪಿಸಿದೆ.

ಕರ್ನಾಟಕ ಮುನಿಸಿಪಾಲಿಟೀಸ್(ಕೌನ್ಸಿಲರ್‌ಗಳ ಚುನಾವಣೆ) ನಿಯಮಗಳು, 1977ರ ನಿಯಮ–64 (ಓ) ಹಾಗೂ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಚುನಾವಣೆ) ನಿಯಮಗಳು, 1979ರ ನಿಯಮ–70(ಓ) ರಲ್ಲಿ, ಮತದಾರನು ಮತಗಟ್ಟೆಗೆ ಬಂದ ನಂತರ ತನ್ನ ಮತವನ್ನು ಯಾವುದೇ ಅಭ್ಯರ್ಥಿಗೆ ನೀಡದೇ ಇರಲು ನಿರ್ಧರಿಸುವುದಕ್ಕೆ ಅವಕಾಶ ಇದೆಯಾದರೂ ತನ್ನ ಇಚ್ಛೆಯನ್ನು ಮತ ಚಲಾಯಿಸುವ ಮೂಲಕ ವ್ಯಕ್ತಪಡಿಸಲು ಅವಕಾಶ ಇರುವುದಿಲ್ಲ.

ಕರ್ನಾಟಕ ಮುನಿಸಿಪಾಲಿಟೀಸ್(ಕೌನ್ಸಿಲರ್‌ಗಳ ಚುನಾವಣೆ) ನಿಯಮಗಳು, 1977ರ ನಿಯಮ-36(1) ಹಾಗೂ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಚುನಾವಣೆ) ನಿಯಮಗಳು, 1979ರ ನಿಯಮ-29ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಮತಪತ್ರದ ನಮೂನೆ, ಹಾಗೂ ಭಾಷೆಗಳನ್ನು ನಿರ್ಧಿಷ್ಟಪಡಿಸಿ, ಅದರಂತೆ ನಿರ್ದೇಶಿಸಲು ಅವಕಾಶವಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ, ಭಾರತ ಸಂವಿಧಾನದ ಅನುಚ್ಛೇದ 243(ಕೆ) ಮತ್ತು 243(ಜಡ್ಎ) ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ದತ್ತವಾಗಿರುವ ಅಧಿಕಾರದ ಮೇಲೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಮತದಾರನು ಚುನಾವಣೆಯಲ್ಲಿ ತನ್ನ ಇಚ್ಚೆಯಂತೆ 'ಯಾರೊಬ್ಬರಿಗೂ ತನ್ನ ಮತ ನೀಡಲು ಇಚ್ಚೆ ಇರುವುದಿಲ್ಲ' ಎಂಬ ತನ್ನ ತೀರ್ಮಾನವನ್ನು ರಹಸ್ಯವಾಗಿ ಮತ ಚಲಾಯಿಸುವ ಮೂಲಕ ವ್ಯಕ್ತಪಡಿಸಲು ಮತಪತ್ರದಲ್ಲಿ/ಇವಿಎಂನಲ್ಲಿ ಸೂಕ್ತ ಅವಕಾಶಗಳನ್ನು ಕಲ್ಪಿಸಲು ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ರಾಚುಆ: 14 :ಇಯುಬಿ : 2017, ಬೆಂಗಳೂರು, ದಿನಾಂಕ: 10-03-2017**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಭಾರತ ಸಂವಿಧಾನದ ಅನುಚ್ಛೇದ 243(ಕೆ) ಮತ್ತು 243(ಜಡ್ಎ) ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ರಾಜ್ಯ ಚುನಾವಣಾ ಆಯೋಗವು ನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ, ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ವ್ಯಕ್ತಿಯು, ತನ್ನ ಮತವನ್ನು ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ತನ್ನ ಇಚ್ಛೆಯಂತೆ ಚಲಾಯಿಸಲು, ಅನುವಾಗುವಂತೆ ಮತಪತ್ರದಲ್ಲಿ / ಅಂಚೆ ಮತಪತ್ರದಲ್ಲಿ /ಇ.ವಿ.ಎಂ.ನಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರಿನ ಕೊನೆಯ ಸಾಲು ಅಥವಾ ಕೊನೆಯ ಪ್ಯಾನೆಲ್‌ನಲ್ಲಿ 'None of the Above' (NOTA) / "ಮೇಲ್ಕಂಡ ಯಾರೂ ಅಲ್ಲ" (ಮೇ ಯಾ ಅ) ಎಂದು ಮುದ್ರಿಸಿ, ಪ್ರತ್ಯೇಕ ಕಾಲಂ ನಲ್ಲಿ ಅವಕಾಶ ಕಲ್ಪಿಸಲು ಆದೇಶಿಸಿದೆ.

ನಗರ ಪಾಲಿಕೆ/ನಗರಸಭೆ/ಪುರಸಭೆ/ ಪಟ್ಟಣ ಪಂಚಾಯಿತಿ ಮತದಾರರು ಇನ್ನು ಮುಂದೆ ನಗರ ಪಾಲಿಕೆ/ನಗರಸಭೆ/ಪುರಸಭೆ/ ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ ತಮ್ಮ ಇಚ್ಛೆಯಂತೆ ಸ್ಪರ್ಧಿಸಿರುವ ಯಾವುದೇ ಅಭ್ಯರ್ಥಿಗೆ ಅಥವಾ 'None of the Above' (NOTA) / "ಮೇಲ್ಕಂಡ ಯಾರೂ ಅಲ್ಲ" (ಮೇ ಯಾ ಅ)ಗೆ ತನ್ನ ಮತವನ್ನು ಚಲಾಯಿಸಬಹುದಾಗಿರುತ್ತದೆ.

ಈ ಬಗ್ಗೆ ಚುನಾವಣಾಧಿಕಾರಿಗಳ ಕೈಪಿಡಿಯಲ್ಲಿ ಹಾಗೂ ಚುನಾವಣೆಗೆ ಸಂಬಂಧಿಸಿದ ನಮೂನೆಯಲ್ಲಿ ಸೂಕ್ತ ತಿದ್ದುಪಡಿಗಳನ್ನು ಹಾಗೂ ತತ್ಸಂಬಂಧದ ಸೂಚನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಮೇಲ್ಕಂಡ 'NOTA' / 'ಮೇ ಯಾ ಅ' ಅವಕಾಶವು ಮುಂದಿನ ಎಲ್ಲಾ ನಗರ ಪಾಲಿಕೆ/ನಗರಸಭೆ/ಪುರಸಭೆ/ ಪಟ್ಟಣ ಪಂಚಾಯಿತಿ ಸಾರ್ವತ್ರಿಕ ಚುನಾವಣೆ/ಉಪ ಚುನಾವಣೆಗಳಿಗೆ ಜಾರಿಗೆ ಬರುತ್ತದೆ.

ಮಾನ್ಯ ಆಯುಕ್ತರ ಆದೇಶದ ಮೇರೆಗೆ

**ನಾಗರಾಜು ಎನ್.ಆರ್**
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 50